<u>**ದಿನಾಂಕಃ 28.03.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**</u>

<u>ಪಾಟೀ ಸವಾಲುಃ ಆರೋಪಿ **ಪರ ಶ್ರೀ** ಎಂ.ಎನ್.ಎಸ್ **ವಕೀಲರಿಂದಃ**</u>

ಈ ಪ್ರಕರಣದ ಆರೋಪಿಯು ನನಗೆ ಸುಮಾರು 4-5 ವರ್ಷಗಳಿಂದ ಪರಿಚಿತರು. ನನ್ನ ಮಾವ ಮತ್ತು ಆರೋಪಿಯು ಸಹೋದ್ಯೋಗಿಗಳು. ಹಾಗಾಗಿ ನನ್ನ ಮಾವನವರ ಮೂಲಕ ಆರೋಪಿಯು ಪರಿಚಯವಾಗಿರುತ್ತಾರೆ. ನನ್ನ ಮಾವ ಗ್ರಾಮ ಲೆಕ್ಕಿಗರಾಗಿ ತಲಕಾಡಿನಲ್ಲಿ ಕೆಲಸ ಮಾಡುತ್ತಿದ್ದರು. ಆರೋಪಿಯು ಉಪ ತಹಸೀಲ್ದಾರರಾಗಿ ಕೆಲಸ ಮಾಡುತ್ತಿದ್ದರು, ಆದರೆ ಎಲ್ಲಿ ಕೆಲಸ ಮಾಡುತ್ತಿದ್ದರು ಎಂದು ನನಗೆ ಗೊತ್ತಿಲ್ಲ. ಆರೋಪಿಯು 2008 ರಲ್ಲಿ ಸರ್ಕಾರಿ ಕೆಲಸದಿಂದ ನಿವೃತ್ತಿ ಹೊಂದಿರುತ್ತಾರೆ. ಆರೋಪಿಯು ನಿವೃತ್ತಿ ಹೊಂದಿದಾಗ ಎಲ್ಲಿ, ಯಾವ ಹುದ್ದೆಯಲ್ಲಿ ಕೆಲಸ ಮಾಡುತ್ತಿದ್ದರು ಎಂದು ನನಗೆ ಗೊತ್ತಿಲ್ಲ. ಆರೋಪಿಯ ಬಗ್ಗೆ ಮತ್ತು ಆರೋಪಿಯ ಸ್ಥಿತಿಗತಿಯ ಬಗ್ಗೆ ನನಗೆ ಏನೂ ಗೊತ್ತಿಲ್ಲ. ಆರೋಪಿಯು ಚಾಮರಾಜನಗರ ತಾಲ್ಲೂಕಿನ ಉಮತ್ತೂರು ಗ್ರಾಮದಲ್ಲಿ ವಾಸಿಸುತ್ತಿದ್ದಾರೆ. ಆರೋಪಿಯ ಹೆಂಡತಿ ಮತ್ತು ಮಕ್ಕಳ ಬಗ್ಗೆ ನನಗೆ ಗೊತ್ತಿಲ್ಲ.

ಆರೋಪಿಯು ದಿನಾಂಕ 03.03.2023 ರ ಹಿಂದೆ 7-8 ದಿನಗಳ ಹಿಂದೆ ತಲಕಾಡಿಗೆ ಬಂದು ನನ್ನನ್ನು ಭೇಟಿ ಮಾಡಿ ಹಣವನ್ನು ಸಾಲವಾಗಿ ಕೇಳಿರುತ್ತಾರೆ. ನಂತರ ನಾನು ದಿನಾಂಕ 03.03.2023 ರಂದು ಆರೋಪಿಗೆ ನಮ್ಮ ಮನೆಯಲ್ಲಿ ರೂ.25000/-ಹಣವನ್ನು ಸಾಲವಾಗಿ ನೀಡಿರುತ್ತೇನೆ. ನಾನು ಆರೋಪಿಗೆ ಹಣವನ್ನು ನೀಡುವ ಸಂಧರ್ಭದಲ್ಲಿ ನನ್ನನ್ನು ಮತ್ತು ಆರೋಪಿಯನ್ನು ಹೊರತುಪಡಿಸಿ ಬೇರೆ ಯಾರೂ ಇರಲಿಲ್ಲ. ಆರೋಪಿಯು 424361 ರ ಸಂಖ್ಯೆಯ ಚೆಕ್ಕನ್ನು ದಿನಾಂಕ 06.06.2023 ರಂದು ತಲಕಾಡಿನಲ್ಲಿ ನನಗೆ ನೀಡಿರುತ್ತಾರೆ. ಸಾಕ್ಷಿದಾರರಿಗೆ ಒಂದು ಭಾವಚಿತ್ರವನ್ನು ತೋರಿಸಲಾಗಿ ಸದರಿ ಭಾವಚಿತ್ರದಲ್ಲಿ ತಾನು ಮತ್ತು ತಮ್ಮ ಗ್ರಾಮದ ರಾಮೇಗೌಡ ಇರುತ್ತೇವೆ ಎಂದು ನೋಡಿ ಒಪ್ಪಿಕೊಂಡಿದ್ದರಿಂದ ಸದರಿ ಭಾವಚಿತ್ರವನ್ನು ನಿಡಿ-1 ಎಂದು ಗುರುತಿಸಲಾಯಿತು. ಸಾಕ್ಷಿದಾರರಿಗೆ ಒಂದು ಭಾವಚಿತ್ರವನ್ನು ತೋರಿಸಲಾಗಿ ಸದರಿ ಭಾವಚಿತ್ರದಲ್ಲಿರುವ ಚೆಕ್ಕನ್ನು ಆರೋಪಿಯು ತನಗೆ ನೀಡಿರುತ್ತಾರೆ ಎಂದು ನೋಡಿ ಒಪ್ಪಿಕೊಂಡಿದ್ದರಿಂದ ಸದರಿ ಭಾವಚಿತ್ರವನ್ನು ನಿಡಿ-2 ಎಂದು ಗುರುತಿಸಲಾಯಿತು.

ಆರೋಪಿಗೆ ಚಾಮರಾಜನಗರ ತಾಲ್ಲೂಕಿನ ಮೂಡಲ ಅಗ್ರಹಾರ ಗ್ರಾಮದ ಸರ್ವೆ ನಂ.33/4 ರಲ್ಲಿ 2 ಎಕರೆ 20 ಗುಂಟೆ ಮತ್ತು ಸರ್ವೆ ನಂ. 159 ರಲ್ಲಿ 4 ಎಕರೆ ಜಮೀನು ಇದೆ ಎಂದರೆ ಸರಿ. ದಿನಾಂಕ 27.04.2022 ರಂದು ಮೇಲೆ ನಮೂದಿಸಿದ ಒಟ್ಟು 6 ಎಕರೆ 20 ಗುಂಟೆ ಜಮೀನಿನ ವಿಚಾರವಾಗಿ ಆರೋಪಿ ಮತ್ತು ಹರೀಶ್ ಬಿನ್ ನಾರಾಯಣಸ್ವಾಮಿರವರ ನಡುವೆ ಕ್ರಯದ ಕರಾರು ಪತ್ರ ಆಗಿತ್ತು ಎಂದರೆ ಸರಿ. ಸದರಿ ಕ್ರಯದ ಕರಾರು ಪತ್ರ ದ ವ್ಯವಹಾರವು ನನ್ನ ಸಮಕ್ಷಮ ನಡೆದಿರುತ್ತದೆ ಎಂದರೆ ಸರಿ. ಸದರಿ ಕ್ರಯದ ಕರಾರು ಪತ್ರಗಳಿಗೆ ನಾನು ಮತ್ತು ಚಂದ್ರುರವರು ಸಾಕ್ಷಿದಾರರಾಗಿ ಸಹಿ ಮಾಡಿದ್ದೇವೆ ಎಂದರೆ ಸರಿ. ಸದರಿ ದಿನಾಂಕ 27.04.2022 ರಂದು ಆರೋಪಿ ಮತ್ತು ಹರೀಶ್ ರವರ ನಡುವೆ ಒಂದು ನೊಂದಾಯಿತ ಕ್ರಯದ ಕರಾರು ಪತ್ರವು ರೂ.13,60,000/-ಗಳಿಗೆ ಮತ್ತೊಂದು ನೊಂದಾಯಿತವಲ್ಲದ ಕ್ರಯದ ಕರಾರು ಪತ್ರವು ರೂ. 32,75,000/-ಗಳಿಗೆ ಆಗಿದೆ ಎಂದರೆ ನನಗೆ ಗೊತ್ತಿಲ್ಲ.

ಈ ಹಂತದಲ್ಲಿ ಆರೋಪಿ ಪರ ವಕೀಲರು ಮುಂದುವರಿದ ಪಾಟೀಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ಕಾಲಾವಕಾಶ ನೀಡಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಂತೆ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

ಹೆಚ್ಚುವರಿ ಸಿವಿಲ್ ಮತ್ತು ಜೆ ಎಮ್ ಎಫ್ ಸಿ
ನ್ಯಾಯಾಧೀಶರು, ತಿ.ನರಸಿಪುರ